ಕಾಯುತ್ತಿದ್ದಂತಿತ್ತು. ರಿಕ್ಷಾವೊಂದು ನಿಂತಿತ್ತು. ಗಂಡಸರು ಹಾಕುವಂತಹ ಮೊಳಕಾಲ ವರೆಗೆ ಬರುವ ಉದ್ದನೆ ಅಂಗಿ ಕೆಳಗೆ ಪಾಯಿಜಾಮ ಧರಿಸಿದ ಅತ್ತೆ ಅವಳನ್ನು ಕರೆದಳು. ದೊಡ್ಡ ಗ್ಲಾಸಿನಲ್ಲಿ ತುಂಬಿದ್ದ ಚಾಯ್ ಕೊಟ್ಟಳು. ಸಕ್ಕರೆ ಜಾಸ್ತಿ ಅನಿಸುವಷ್ಟಿತ್ತು. ಗಂಡಸರೆದುರು ಪರದೆಯಿಲ್ಲದೆ ಹೋಗಬಾರದು ಅಂತ ಎಚ್ಚರಿಸಿದಳು. ಆವತ್ತು ರಾತ್ರಿ ಅದೇ ಒರಟುತನ ಮರುಕಳಿಸಿದರು ಅಂತಹ ಉರಿಯೆನಿಸದೆ ಮುಂದೆ ಎಲ್ಲ ಸರಿಯಾಗಬಹುದು ಅನ್ನುವ ಆಸೆ ಮೊಳೆತಿತು. ಎರಡು ದಿನಕ್ಕೆ ಟೆಂಪೊ ಮಾಡಿಕೊಂಡು ಅವಳು ಅವಳ ಗಂಡ ಮತ್ತು ಅತ್ತೆ ಹೊರಟರು. ದಿಲ್ಲಿಯ ಕಾಲ್ಕಾಜಿ ಅನ್ನುವಲ್ಲಿ ಅವರ ಕುಲದೇವಿ ಇದೆಯಂತೆ. ಅಲ್ಲಿ ಹರಕೆಯೊಪ್ಪಿಸಲು ಹೊರಟಿದ್ದರು. ಕಾಳಿಕಾದೇವಿಯ ಮೂರ್ತಿ ಸುಂದರವಾಗಿತ್ತು. ಹೋಗಿಬರಲು ಆರುತಾಸಿನ ದಾರಿ. ತನ್ನನ್ನು ಮದುವೆಯಾಗಿ ಕರೆತಂದದ್ದು ಹರ್ಯಾಣದ ರೇವಾಡಿಗೆ, ತನ್ನ ಗಂಡನ ಹೆಸರು ಕುಲಬೀರ, ಅವರು ಜಾಟರಲ್ಲಿ ಎಂತದೋ ಉಪಜಾತಿಯವರು, ಕುಲಕಸುಬು ಹೈನಗಾರಿಕೆ ಅಂತ ಗೊತ್ತಾಯಿತು. ಅವರ ಮನೆಯಿರುವ ಜಾಗ ರೇವಾಡಿಯ ಕಾನಮಾಜರಾ ಅಂತ ಕರೆಸಿಕೊಳ್ಳುವ ಉಪನಗರ. ಹತ್ತಿರದ ರೈಲ್ವೆ ಕಾಲನಿಯ ಜನ ತಿಂಗಳ ಲೆಕ್ಕದಲ್ಲಿ ಹಾಲು ಒಯ್ಯುತ್ತಿದ್ದರು. ಉಳಿದದ್ದನ್ನು ಹೋಟೆಲಿಗೆ ಕೊಡುತ್ತಿದ್ದರು. ವ್ಯಾಪಾರ ಚನ್ನಾಗಿತ್ತು. ಕ್ರಮೇಣ ಗೊತ್ತಾಗಿತ್ತು. ಗಂಡುಕರುಗಳನ್ನು ಸಾಯಲು ಬಿಟ್ಟುಬಿಡುತ್ತಿದ್ದರು. ಎಮ್ಮೆಗೆ ಕರೆಯುವ ಮೊದಲು ಯಾವುದೊ ಇಂಜೆಕ್ಷನ್ ಕೊಟ್ಟರೆ ಸೋರಿಳಿದುಬಿಡುತ್ತಿತ್ತು. ಬೆಳಗ್ಗೆ ಪೂರಿ ಕರಿಯಲು ಹಚ್ಚಿದ ಅತ್ತೆ ಎಣ್ಣೆಯಲ್ಲಿ ಆಲೂಟಮಾಟರ್ ಸಬ್ಜಿ ಮಾಡುವುದನ್ನು ಕಲಿಸಿದಳು. ಮಧ್ಯಾಹ್ನ ಗೋಧಿರೊಟಿ ತರಕಾರಿಗಳ ಸಬ್ಜಿ, ರಾತ್ರಿ ಅದೇ. ಅಡುಗೆಗೆ ಸಾಸುವೆ ಎಣ್ಣೆ. ಗಂಡನಿಗೆ

